KACM010010622021

Presented on : 04-05-2021
Registered on : 04-05-2021
Decided on : --
Duration :

**IN THE COURT OF**
**ADDL DISTRICT AND SESSIONS JUDGE CHIKMAGALUR**
**AT Chikmagalur,CHIKMAGALUR**
**(Presided Over by B PUSHPANJALI)**

**SC/87/2021**

**Exhibit No.**

Complainant(PROSECUTION):

State by Sakharayapatna Police, Rept. by The Public Prosecutor, Chikkamagaluru.

**VERSUS**

Accused:
Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM
Age: 33
Occupation :
R/o Machagondanahalli Village, S.K. Patna Hobli, Kadur Taluk, CKM

---------------------------------------------------------------------------

APP for State Complainant}: Public Prosecutor,
Advocate for I.S. THEJASVI appearing for Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM Advocate appearing for , respectively.

---------------------------------------------------------------------------

**Offence punishable under :**
**Sec.302, of INDIAN PENAL CODE,**

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,**
**ಚಿಕ್ಕಮಗಳೂರು**

**<u>ಸತ್ರ ಮೊಕದ್ದಮೆ ಸಂಖ್ಯೆಃ 87/2021</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಉಷಾ | **ಪಿ.ಡಬ್ಲ್ಯೂ** | 01 |
| **ಗಂಡನ ಹೆಸರು** | ಲೇಟ್ ಶಿವಕುಮಾರ | **ಸಿ.ಡಬ್ಲ್ಯೂ** | 01 |
| **ವಯಸ್ಸು** | 39 ವರ್ಷ | | |
| **ಉದ್ಯೋಗ** | ಗೃಹಿಣಿ | | |
| **ವಾಸಸ್ಥಳ** | ಮಾಚಗೊಂಡನಹಳ್ಳಿ, ಕಡೂರು ತಾಃ | | |

**<u>ಆರೋಪಿಯನ್ನು ಚಿಕ್ಕಮಗಳೂರು ಜಿಲ್ಲಾ ಕಾರಾಗೃಹದಿಂದ ವಿ.ಸಿ. ಮೂಲಕ ಹಾಜರು ಪಡಿಸಿರುತ್ತಾರೆ</u>**

**ದಿಃ 05-08-2022 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

1. **ಈಗ ನ್ಯಾಯಾಲಯದ ಮುಂದೆ ವಿ.ಸಿ. ಮೂಲಕ ಕಾಣುತ್ತಿರುವ ಆರೋಪಿ ನನ್ನ ತಮ್ಮ. ಮೃತ ತಮ್ಮಯ್ಯ ನನ್ನ ತಂದೆ. ಚಾಸಾ.6 ನನ್ನ ತಾಯಿ. ಚಾಸಾ.7 ನನ್ನ ಮಾವ. ಚಾಸಾ.9 ನನ್ನ ತಂದೆಯ ತಂಗಿ ಮಗ. ಚಾಸಾ.10 ನನ್ನ ತಂದೆಯ ತಮ್ಮ. ಚಾಸಾ.11 ನಮ್ಮ ಊರು ಮನೆಯವರು. ಉಳಿಕೆ ಸಾಕ್ಷಿದಾರರು ನನಗೆ ಗೊತ್ತಿಲ್ಲ.**

2. **ದಿಃ 11-01-2021 ರಂದು ನನ್ನ ಚಿಕ್ಕಪ್ಪ ಚಾಸಾ.10 ಹಾಗೂ ನಮ್ಮ ತಂದೆಯ ನಡುವೆ ಆಸ್ತಿ ವಿಚಾರವಾಗಿ ಜಗಳವಾಯಿತು. ಆ ದಿನ ನನ್ನ ತಂದೆ ಮದ್ಯಪಾನ ಮಾಡಿದ್ದು, ನಾನು ಜಗಳ ಮಾಡಿಕೊಳ್ಳಬೇಡಿ ಎಂದು ಕರೆದರು**

ಸಹ ನನ್ನ ಮಾತನ್ನು ಕೇಳದೇ ತೋಟದ ಕಡೆ ಹೋಗುತ್ತೇನೆ ಎಂದು ಹೇಳಿ ಹೋಗಿರುತ್ತಾರೆ. ನನ್ನ ತಂದೆ ಹೋಗುವುದನ್ನು ನಾನು ನೋಡುತ್ತಿದ್ದಾಗ ನನ್ನ ತಂದೆಯವರು ತೋಟದ ಕಡೆ ಹೋಗುವಾಗ ಮುಂದೆ ಇದ್ದ ಕಲ್ಲಿಗೆ ಎಡವಿ ಬಿದ್ದಾಗ ಅವರ ತಲೆಗೆ ಏಟಾಯಿತು. ಆಗ ನಾನು ಚಾಸಾ.9 ರವರಿಗೆ ಫೋನ್ ಮಾಡಿ ವಿಷಯ ತಿಳಿಸಿ ಕರೆದಿರುತ್ತೇನೆ. ಚಾಸಾ.9 ರವರು ನನ್ನ ತಂದೆಯವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಷ್ಟರಲ್ಲೇ ಮೃತಪಟ್ಟಿರುತ್ತಾರೆ.

3. ನನ್ನ ಗಂಡ ಮೃತಪಟ್ಟು 3 ತಿಂಗಳಾಗಿದ್ದರಿಂದ ನಾನು ಟೆನ್ಸನ್ ನಲ್ಲಿದ್ದೆ. ಆಗ ಅಲ್ಲಿದ್ದವರು ಕೆಲವು ದಾಖಲೆಗಳಿಗೆ ರುಜು ಮಾಡು ಅಂತ ನನ್ನನ್ನು ಕೇಳಿದರು, ಆಗ ನಾನು ರುಜು ಮಾಡಿ ಕೊಟ್ಟಿರುತ್ತೇನೆ. ನನ್ನ ತಂದೆಯನ್ನು ನನ್ನ ತಮ್ಮನಾದ ಆರೋಪಿ ಕೊಲೆ ಮಾಡಿದ್ದಾನೆ ಎಂದು ಯಾವುದೇ ದೂರು ಕೊಟ್ಟಿಲ್ಲ. ಈಗ ತೋರಿಸಿದ ದಾಖಲೆಯಲ್ಲಿ ನನ್ನ ರುಜು ಇರುತ್ತದೆ. ಸದರಿ ದಾಖಲೆ ಪ್ರಕರಣದ ದೂರಾಗಿದ್ದು, ಅದನ್ನು ನಿಶಾನೆ ಪಿ.1 ಎಂದು, ಸಹಿಯನ್ನು ನಿಶಾನೆ ಪಿ.1(ಎ) ಎಂದು ಗುರುತಿಸಲಾಯಿತು. ನಿಪಿ.1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ.

4. ಈಗ ತೋರಿಸಿದ ಇನ್ನೊಂದು ದಾಖಲೆಯಲ್ಲಿ ನನ್ನ ರುಜು ಇರುತ್ತದೆ. ಸದರಿ ದಾಖಲೆ ಪ್ರಕರಣದ ಸ್ಥಳ ಮಹಜರಾಗಿದ್ದು ಅದನ್ನು ನಿಶಾನೆ ಪಿ.2 ಎಂದು, ಸಹಿಯನ್ನು ನಿಶಾನೆ ಪಿ.2(ಎ) ಎಂದು ಗುರುತಿಸಲಾಯಿತು. ನನ್ನ ಜೊತೆ ಚಾಸಾ.4 ಮತ್ತು 5 ರವರು ರುಜು ಮಾಡಿರುತ್ತೇವೆ. ಈಗ ತೋರಿಸಿದ ಫೋಟೋಗಳಲ್ಲಿ ನನ್ನ ಇರುವಿಕೆ ಕಂಡು ಬರುತ್ತದೆ. ಸದರಿ

ಫೋಟೋಗಳನ್ನು ನಿಶಾನೆ ಪಿ.3 ಮತ್ತು ಪಿ.4 ಎಂದು ಗುರುತಿಸಲಾಯಿತು. ನನ್ನ ತಂದೆ ಬಿದ್ದು ತಲೆಗೆ ಏಟು ಮಾಡಿಕೊಂಡ ಜಾಗದಲ್ಲಿ ನಿಶಾನೆ ಪಿ.4 ಫೋಟೋವನ್ನು ತೆಗೆದಿರುತ್ತಾರೆ. ನಿಪಿ.2 ರ ಮಹಜರನ್ನು ದಿಃ 11-01-2021 ರಂದು ಸಂಜೆ 6 ಗಂಟೆಗೆ ಬರೆದಿರುತ್ತಾರೆ. ಪೊಲೀಸರು ನನ್ನ ಮುಂದೆ ಯಾವುದೇ ಮಹಜರ ಮಾಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆ ಮತ್ತು ಮಹಜರಿಗೆ ವಿರುದ್ಧವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

5. ನಮ್ಮ ತಂದೆ-ತಾಯಿಗೆ ನಾನು ಮತ್ತು ಆರೋಪಿ ಇಬ್ಬರೇ ಮಕ್ಕಳು ಎಂದರೆ ಸರಿ. ಆರೋಪಿಗೆ ಇನ್ನೂ ಮದುವೆಯಾಗಿಲ್ಲ ಎಂದರೆ ಸರಿ. ನನ್ನ ಗಂಡ ಮೃತಪಟ್ಟ ನಂತರ ನಾನು ತವರು ಮನೆಯಲ್ಲೇ ವಾಸವಾಗಿದ್ದೇನೆ ಎಂದರೆ ಸರಿ.

6. ಆರೋಪಿಯು ಹೆಚ್.ಡಿ.ಎಫ್.ಸಿ. ಫೈನಾನ್ಸ್ ನಲ್ಲಿ ಸಾಲ ಪಡೆದು ಒಂದು ಟ್ರ್ಯಾಕ್ಟರ್ ನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಬ್ಯಾಂಕಿಗೆ ಸಾಲದ ಕಂತು ಕಟ್ಟುವ ವಿಚಾರದಲ್ಲಿ ಆಗಾಗ ನನ್ನ ತಂದೆ ಮತ್ತು ಆರೋಪಿಯ ಮಧ್ಯೆ ಗಲಾಟೆಯಾಗುತ್ತಿತ್ತು ಎಂದರೆ ಸರಿಯಲ್ಲ. ದಿಃ 11-01-2021 ರಂದು ಬೆಳಗ್ಗೆ ನನ್ನ ತಂದೆ ಜಮೀನು ಕೆಲಸಕ್ಕೆ ಹೋಗಿದ್ದು, ಮಧ್ಯಾಹ್ನ 3 ಗಂಟೆಗೆ ವಾಪಸ್ ಮನೆಗೆ ಬಂದು ಮನೆಯಲ್ಲಿದ್ದ ಆರೋಪಿಗೆ ಹೆಚ್.ಡಿ.ಎಫ್.ಸಿ. ಫೈನಾನ್ಸ್ ರವರು ಬಂದು ಕಂತು ಕಟ್ಟದಿರುವ ಬಗ್ಗೆ

ಕೇಳಿದರು ಎಂದು ಹೇಳಿದ್ದು, ಆಗ ಒಬ್ಬರಿಗೊಬ್ಬರು ಮಾತಿಗೆ ಮಾತು ಬೆಳೆದು ಬೈದಾಡಿಕೊಂಡರು ಎಂದರೆ ಸರಿಯಲ್ಲ. ಆಗ ಆರೋಪಿಯು ನನ್ನ ತಂದೆಗೆ, ನಿನ್ನನ್ನು ಸಾಯಿಸುತ್ತೇನೆ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ. ನಂತರ ಮಧ್ಯಾಹ್ನ 3.30 ಗಂಟೆಗೆ ನನ್ನ ತಂದೆ ತೋಟಕ್ಕೆ ಹೋಗುವುದಾಗಿ ಮನೆಯಿಂದ ಹೊರಟು ಮನೆಯ ಬಳಿ ಮತ್ತೆ ಆರೋಪಿಯು ನನ್ನ ತಂದೆಯೊಂದಿಗೆ ಗಲಾಟೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಅವರು ಗಲಾಟೆ ಮಾಡಿಕೊಳ್ಳುವುದನ್ನು ನೋಡಿ ನಾನು ಅಲ್ಲಿಗೆ ಹೋಗಿ ನೋಡಿದಾಗ ಆರೋಪಿಯು ನನ್ನ ತಂದೆಯವರಿಗೆ, ನಿನ್ನನ್ನು ಸಾಯಿಸಿ ಕಂತು ಕಟ್ಟುತ್ತೇನೆ ಎಂದು ಅಲ್ಲೇ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು ಹೊಡೆಯಲು ಹೋದಾಗ ನನ್ನ ತಂದೆಯವರು ಅಲ್ಲಿಂದ ಓಡಿ ಹೋದರು ಎಂದರೆ ಸರಿಯಲ್ಲ. ಆರೋಪಿಯು ಕೈಯಲ್ಲಿ ಕಲ್ಲನ್ನು ಹಿಡಿದುಕೊಂಡು ನನ್ನ ತಂದೆಯ ಹಿಂದೆ ಹೋದನು ಎಂದರೆ ಸರಿಯಲ್ಲ. ಪ್ರತಿದಿನದ ಜಗಳದಂತೆ ಇವರು ಸ್ವಲ್ಪ ಸಮಯಕ್ಕೆ ಸರಿಯಾಗುತ್ತಾರೆ ಎಂದು ನಾನು ಭಾವಿಸಿ ಮನೆಯೊಳಗೆ ಬಂದು ಮಕ್ಕಳೊಂದಿಗೆ ಇದ್ದೆನು ಎಂದರೆ ಸರಿಯಲ್ಲ.

7. ನಂತರ ಸ್ವಲ್ಪ ಸಮಯಕ್ಕೆ ಸಂಜೆ 4 ಗಂಟೆಗೆ ನಮ್ಮ ಊರಿನವರಾದ ಯಾರೋ ಒಬ್ಬರು ಬಂದು ಆರೋಪಿಯು ಶಾಲೆಯ ಹಿಂಭಾಗದ ಓಣಿಯಲ್ಲಿ ಕಲ್ಲಿನಿಂದ ನನ್ನ ತಂದೆಯ ತಲೆಗೆ ಹೊಡೆದು ಸಾಯಿಸಿರುತ್ತಾನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ನಮ್ಮೂರಿನ ಹಿರಿಯ ಪ್ರಾಥಮಿಕ ಶಾಲೆಯ ಹಿಂಭಾಗದ ಓಣಿಯಲ್ಲಿ ಗಜೇಂದ್ರರವರ ಮನೆಯ ಮುಂದೆ ಹೋಗಿ ನೋಡಿದಾಗ ನನ್ನ ತಂದೆಯವರು ನೆಲದಲ್ಲಿ

ಬಿದ್ದಿದ್ದು, ಆರೋಪಿಯು ಪಕ್ಕದಲ್ಲಿಯೇ ನಿಂತಿದ್ದು, ನನ್ನನ್ನು ನೋಡಿ ಅಲ್ಲಿಂದ ಓಡಿ ಹೋದನು ಎಂದರೆ ಸರಿಯಲ್ಲ. ನಂತರ ನಾನು ಹತ್ತಿರ ಹೋಗಿ ನೋಡಿದಾಗ ನನ್ನ ತಂದೆಯವರ ತಲೆಗೆ ತೀವ್ರ ಪೆಟ್ಟಾಗಿ ರಕ್ತ ಹೊರ ಬಂದು ಸ್ಥಳದಲ್ಲಿಯೇ ಮೃತಪಟ್ಟಿದ್ದರು ಮತ್ತು ಅವರ ಬಳಿ ಕಲ್ಲು ಬಿದ್ದಿದ್ದು, ಅದು ರಕ್ತವಾಗಿತ್ತು ಎಂದರೆ ಸರಿಯಲ್ಲ. ಆರೋಪಿಯು ಕಲ್ಲಿನಿಂದ ನನ್ನ ತಂದೆಯ ಎಡ ತಲೆ, ಕಿವಿ ಬಳಿ ಹೊಡೆದು ಸಾಯಿಸಿರುತ್ತಾನೆ ಎಂದು ಪೊಲೀಸರಿಗೆ ಈಗ ಓದಿ ಹೇಳಿದ ನಿಶಾನೆ ಪಿ.1 ರಂತೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

8. ನಂತರ ದಿಃ 12-01-2021 ರಂದು ಪೊಲೀಸರು ತನಿಖೆಗಾಗಿ ಬಂದಾಗ ನಾನು ನಮ್ಮ ಮನೆಯ ಮುಂದೆ ಆರೋಪಿ ಹಾಗೂ ನನ್ನ ತಂದೆ ಜಗಳ ಮಾಡಿಕೊಂಡಿದ್ದ ಸ್ಥಳ ಹಾಗೂ ಅಲ್ಲೇ ಇದ್ದ ಕಲ್ಲನ್ನು ಆರೋಪಿ ಎತ್ತಿಕೊಂಡು ಹೋದ ಜಾಗವನ್ನು ಪೊಲೀಸರಿಗೆ ತೋರಿಸಿದ ಮೇರೆಗೆ ಚಾಸಾ.2 ಮತ್ತು 3 ರವರ ಸಮಕ್ಷಮ ನಿಪಿ.2 ರಂತೆ ಮಧ್ಯಾಹ್ನ 12 ರಿಂದ 1 ಗಂಟೆಯ ತನಕ ಮಹಜರನ್ನು ಬರೆದು ನಿಪಿ.3 ಮತ್ತುಪಿ.4 ಫೋಟೋಗಳನ್ನು ಸ್ಥಳದಲ್ಲಿ ತೆಗೆದಾಗ ನಾನು, ಚಾಸಾ.2 ಮತ್ತು 3 ರವರು ರುಜು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.3 ಮತ್ತು ಪಿ.4 ಫೋಟೋಗಳಲ್ಲಿ ನನ್ನ ಜೊತೆ ಚಾಸಾ.2 ಮತ್ತು 3 ರವರ ಇರುವಿಕೆ ಕಂಡು ಬರುತ್ತದೆ ಎಂದರೆ ಸರಿಯಲ್ಲ.

9. ನಾನು ಎಸ್.ಎಸ್.ಎಲ್.ಸಿ. ಯವರೆಗೆ ಓದಿರುತ್ತೇನೆ. ನನಗೆ ಸಾಮಾನ್ಯ ಜ್ಞಾನ ಇದೆ ಎಂದರೆ ಸರಿ. ನಾನು ಯಾವುದೇ ದಾಖಲೆಗೆ ರುಜು ಮಾಡುವ ಮೊದಲು ಓದಿ ತಿಳಿದುಕೊಳ್ಳದೇ ರುಜು ಮಾಡುತ್ತೇನೆ ಎಂದರೆ

ಆ ದಿನ ನಾನು ಟೆನ್ಸನ್ ನಲ್ಲಿದ್ದ ಕಾರಣ ಓದಿ ತಿಳಿದುಕೊಳ್ಳದೇ ರುಜು ಮಾಡಿರುತ್ತೇನೆ. ನನ್ನ ಗಂಡ ಮೃತಪಟ್ಟಿದ್ದರಿಂದ ಟೆನ್ಸನ್ ನಲ್ಲಿದ್ದೆ. ನನ್ನ ಗಂಡ ದಿಃ 12-08-2020 ರಲ್ಲಿ ಮೃತಪಟ್ಟಿರುತ್ತಾರೆ. ನಾನು ನನ್ನ ತಂದೆ-ತಾಯಿಯೊಂದಿಗೆ ಪ್ರೀತಿ ವಿಶ್ವಾಸದಿಂದ ಇದ್ದೆ ಎಂದರೆ ಸರಿ. ನನ್ನ ತಮ್ಮ ಆರೋಪಿ ಜೈಲಿನಲ್ಲಿರುವುದರಿಂದ ಆತ ಹೊರಗೆ ಬರಲಿ ಎಂದು ನನ್ನ ತಂದೆಯ ಜೊತೆ ಪ್ರೀತಿಯಿಂದ ಇದ್ದಿದ್ದರು ಸಹ ತಮ್ಮನಿಗೆ ಸಹಾಯ ಮಾಡಲು ಎಲ್ಲಾ ವಿಷಯ ಗೊತ್ತಿದ್ದರು ಸಹ ಮರೆಮಾಚಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನ್ಯಾಯಾಲಯಕ್ಕೆ ನನ್ನ ತಾಯಿ ಮತ್ತು ಚಿಕ್ಕಮ್ಮ ಬಂದಿದ್ದಾರೆ. ಆದರೆ ನನ್ನ ಜೊತೆ ಬಂದಿರುವುದಿಲ್ಲ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ</u>

10. ನಿಪಿ.1 ಕ್ಕೆ ಪೊಲೀಸರ ಕೋರಿಕೆಯ ಮೇರೆಗೆ ರುಜು ಮಾಡಿರುವುದನ್ನು ಬಿಟ್ಟರೆ ನನಗೆ ಬೇರೆ ವಿಚಾರ ಗೊತ್ತಿಲ್ಲ. ನಿಪಿ.3 ಮತ್ತು ಪಿ.4 ರ ಫೋಟೋಗಳನ್ನು ಕೇಸಿಗೆ ಬೇಕು ಎಂದು ನನ್ನನ್ನು ಪೊಲೀಸರು ಕರೆಸಿ ಫೋಟೋ ತೆಗೆದರು ಎಂದರೆ ಸರಿ. ನಿಪಿ.2 ರ ಮಾಹಿತಿ ನನಗೆ ಗೊತ್ತಿಲ್ಲ. ಪೊಲೀಸ್ ಠಾಣೆಯಲ್ಲಿ ಪೊಲೀಸರು ತೋರಿಸಿದ ಜಾಗದಲ್ಲಿ ನಿಪಿ.2 ಕ್ಕೆ ರುಜು ಮಾಡಿರುವುದು ಬಿಟ್ಟರೆ ನನಗೆ ಬೇರೆ ಮಾಹಿತಿ ನನಗೆ ಗೊತ್ತಿಲ್ಲ ಎಂದರೆ ಸರಿ.

**<u>ಮರು ವಿಚಾರಣೆಃ</u> ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).**

**ಓ ಹೇ ಕೇ ಸ ಇ ಎ ಒ**
**ಸಹಿ/-**

**(ಬಿ.ಪುಷ್ಪಾಂಜಲಿ)**
1 **ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಮಗಳೂರು.**

ರೂ.

Visit **ecourts.gov.in** for updates or download mobile app "**eCourts Services**" from Android or iOS